# ಕ್ರಾಂತಿಕಾರೀ ಸಂತ ಸ್ವಾಮಿ ವಿವೇಕಾನಂದ

ಡಾ. ಜಿ.ಎಸ್. ಶಿವರುದ್ರಪ್ಪ

## 'ಕ್ರಾಂತಿ' ಮತ್ತು 'ಸಂತ' ಶಬ್ದಗಳ ಅರ್ಥಭೇದ

ಸ್ವಾಮಿ ವಿವೇಕಾನಂದರನ್ನು **'ಕ್ರಾಂತಿಕಾರೀ ಸಂತ'** ಎಂದು ಕರೆಯುವುದು ಮೇಲುನೋಟಕ್ಕೆ ಒಂದು ವಿರೋಧಾಭಾಸದಂತೆ ತೋರಬಹುದು. ಯಾಕೆಂದರೆ **'ಕ್ರಾಂತಿ'** ಮತ್ತು **'ಸಂತ'** ಎಂಬ ಎರಡು ಪದಗಳು ಸೂಚಿಸುವ ಅರ್ಥಗಳು ಮತ್ತು ಆ ಅರ್ಥಗಳು ನಮ್ಮ ಮನಸ್ಸಿನ ಮುಂದೆ ಕಟ್ಟಿ ನಿಲ್ಲಿಸುವ ಚಿತ್ರಗಳು ಖಂಡಿತವಾಗಿಯೂ ಒಂದು ಮತ್ತೊಂದಕ್ಕೆ ವಿರೋಧಾಭಾಸಗಳೆಂಬಂತೆ ಭಾಸವಾಗಬಹುದು. **'ಕ್ರಾಂತಿ'** ಅಂದ ಕೂಡಲೆ ಜಗತ್ತಿನ ಇತಿಹಾಸದಲ್ಲಿ ನಡೆದಿರುವ ಅನೇಕ ಕ್ಷಿಪ್ರ ಬದಲಾವಣೆಗಳೂ ಅವುಗಳ ಹಿಂದಿರುವ ಸರ್ವಾಧಿಕಾರಿಗಳ, ಜನನಾಯಕರ, ಯೋಧರ ಚಿತ್ರಗಳೂ ಹಿಂಸೆ – ಹೋರಾಟ– ರಕ್ತಪಾತ ಇತ್ಯಾದಿಗಳ ನೆನಪುಗಳೂ ಸಹಜವಾಗಿಯೇ ನಮ್ಮ ಮನಸ್ಸಿನ ಮುಂದೆ ಹಾದು ಹೋಗುತ್ತವೆ. ಫ್ರೆಂಚ್ ಮಹಾಕ್ರಾಂತಿ, ರಷ್ಯಾದ ರಾಜ್ಯಕ್ರಾಂತಿ, ಚೀನಾದ ಜನಕ್ರಾಂತಿ ಇತ್ಯಾದಿ ಚಾರಿತ್ರಿಕ ಘಟನೆಗಳೂ ನಮ್ಮ ಕಣ್ಣ ಮುಂದೆ ಬಂದು ನಿಲ್ಲುತ್ತವೆ. ಆದರೆ **'ಸಂತ'** ಎಂದ ಕೂಡಲೇ ಇದಕ್ಕೆ ವಿರುದ್ಧವಾದ ಚಿತ್ರಗಳು ಮೂಡುತ್ತವೆ. ತ್ಯಾಗ, ಶಾಂತಿ, ಧ್ಯಾನ, ತಪಸ್ಸು, ವೈರಾಗ್ಯ, ಕರುಣೆ, ಅನುಕಂಪ ಇತ್ಯಾದಿ ಗುಣಗಳು ಮತ್ತು ಇಂಥ ಗುಣಗಳನ್ನು ಮೈಗೂಡಿಸಿಕೊಂಡ ಹಲವು ವ್ಯಕ್ತಿತ್ವದ ನೆನಪುಗಳು ಮನಸ್ಸಿನ ಮಂದೆ ಬಂದು ನಿಲ್ಲುತ್ತವೆ.

**ನಿಜವಾದ ಅರ್ಥದಲ್ಲಿ ಕ್ರಾಂತಿ ಎಂದರೆ ಏನು, ಮತ್ತು ಸ್ವಾಮಿ ವಿವೇಕಾನಂದರು ಹೇಗೆ ಕ್ರಾಂತಿಕಾರೀ ಸಂತರಾಗಿದ್ದರು ಎಂಬುದನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ ಸುಪ್ರಸಿದ್ಧ ಸಾಹಿತಿಗಳಾದ ಡಾ. ಜಿ.ಎಸ್. ಶಿವರುದ್ರಪ್ಪನವರು**

## ನಿಜವಾದ 'ಕ್ರಾಂತಿ' ಎಂದರೇನು?

ವಾಸ್ತವವಾಗಿ 'ಕ್ರಾಂತಿ' ಅನ್ನುವ ಪದಕ್ಕೆ ನಾವು ಕೊಟ್ಟುಕೊಳ್ಳುವ ಅರ್ಥ ಕೇವಲ ಸಂಕುಚಿತವೂ, ಏಕಪಕ್ಷೀಯವೂ ಆಗಿದೆ. ಅದನ್ನು ಸರಿಯಾಗಿ ಗ್ರಹಿಸಿ ಅರ್ಥೈಸುವುದಾದರೆ, 'ಕ್ರಾಂತಿ' ಎನ್ನುವ ಪದದ ಅರ್ಥ–' **ಅಮೂಲಾಗ್ರವಾದ ಬದಲಾವಣೆ'** ಎನ್ನುವುದೇ ಸರಿಯಾದದ್ದು. ನಿದರ್ಶನಕ್ಕೆ ಇತ್ತೀಚೆಗೆ ವಿಶೇಷವಾಗಿ ಬಳಕೆಯಾಗುತ್ತಿರುವ 'ಹಸಿರು ಕ್ರಾಂತಿ' ಎಂಬ ಪದ ಸೂಚಿಸುವ ಅರ್ಥವನ್ನೆ ಗಮನಿಸಬಹುದು. ಇದೇ ಪಟ್ಟಿಗೆ ಸಾಮಾಜಿಕ ಕ್ರಾಂತಿ, ಧಾರ್ಮಿಕ ಕ್ರಾಂತಿ ಎಂಬಂಥ ಮಾತುಗಳನ್ನೂ ಸೇರಿಸಿಕೊಳ್ಳಬಹುದು. 'ಕ್ರಾಂತಿ' ಎಂದರೆ ಮುಖ್ಯವಾಗಿ ಒಂದು ಸಿದ್ಧ ಅಥವಾ ಸ್ಥಗಿತ ವ್ಯವಸ್ಥೆಯಲ್ಲ, ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಂದ ಆಗುವ ಹಠಾತ್ ಪರಿವರ್ತನೆ ಅಥವಾ ಬದಲಾವಣೆ ಎಂದು ಹೇಳಬಹುದು. ಈ ಕ್ಷಿಪ್ರವಾದ ಬದಲಾವಣೆಗಳು ರಾಜಕೀಯವಾಗಿ ಸಂಭವಿಸಿದಾಗ, ಅವುಗಳ ಜತೆಗೆ ಸಂಗಡಿಸಿಕೊಳ್ಳುವ ಕೋಲಾಹಲ – ಸಂಘರ್ಷ– ರಕ್ತಪಾತ– ಹಿಂಸೆ– ಇತ್ಯಾದಿಗಳಿಂದ ಅದು ಹೇಗೋ 'ಕ್ರಾಂತಿ' ಎನ್ನುವ ಮಾತಿಗೆ ಕೊಂಚ ರಕ್ತದ ಬಣ್ಣ ಅಂಟಿಕೊಂಡುಬಂದಿದೆ. ಆದರೆ ಬದಲಾವಣೆಗಳು ಹೀಗೆ ರಕ್ತರಂಜಿತವಾಗದೆಯೂ ಸಂಭವಿಸಿವೆ, ಸಂಭವಿಸುತ್ತವೆ ಎಂಬುದನ್ನು ಮರೆಯಬಾರದು. ಈಗ ಪ್ರಸ್ತಾಪಿಸಿದ ರಾಜಕೀಯ ಕ್ರಾಂತಿಗಳು ಇರುವ ವ್ಯವಸ್ಥೆಯನ್ನು , ವಾಸ್ತವವನ್ನು ಬದಲಾಯಿಸುತ್ತವೆ ಅಷ್ಟೆ. ಇದು ಮುಖ್ಯವಾದದ್ದೆ. ಆದರೆ ಯಾವ 'ಕ್ರಾಂತಿ' ಮನುಷ್ಯಜೀವನದ ಹೊರಗನ್ನು ಮಾತ್ರವಲ್ಲ, ಅವನ ಒಳಗನ್ನೂ ಬದಲಾಯಿಸುವುದರ ಮೂಲಕ ಸಮಗ್ರ ಪರಿವರ್ತನೆಯನ್ನು ತರಬಲ್ಲದೋ ಅದೀಗ ನಿಜವಾದ ಕ್ರಾಂತಿ. ಇಂಥ ನಿಜವಾದ 'ಕ್ರಾಂತಿ'ಸಂಭವಿಸಿರುವುದು ಸಂತರಿಂದಲೇ. ಈ ದೃಷ್ಟಿಯಿಂದ ಹೇಳುವುದಾದರೆ, ಈ ದೇಶದ ನಿಜವಾದ ಕ್ರಾಂತಿಕಾರಿಗಳೆಂದರೆ ಸಂತರೇ.

## ವಿವೇಕಾನಂದ ಮತ್ತು ವಸಂತ ಋತು

ಆಚಾರ್ಯ ಶಂಕರರ ಕಾವ್ಯಮಯವಾದ ಉಕ್ತಿಯೊಂದು ಸುಪ್ರಸಿದ್ಧವಾಗಿದೆ: **'ಶಾಂತರೂ, ಮಹಾಂತರೂ ಆದ ಸಂತರು, ವಸಂತದ ಹಾಗೆ ಲೋಕಹಿತಕ್ಕಾಗಿ ಸಂಚಾರ ಮಾಡುತ್ತಾರೆ.'**

ಯಾವ ಯಾವ ಕಾಲಗಳಲ್ಲಿ ಜನಜೀವನವು ಮಾಘಮಾಸದ ಮರಗಳಂತೆ, ಹಳೆಯ ಎಲೆಗಳನ್ನುದುರಿಸಿಕೊಂಡು ನಗ್ನವೂ, ನೀರವವೂ, ವಿಷಣ್ಣವೂ ಆಗಿ ಹೊಸ ಹುಟ್ಟಿಗೆ ಕಾದು ನಿಲ್ಲುತ್ತದೆಯೋ, ಅಂಥ ಕಾಲಗಳಲ್ಲಿ, ಮರಮರದ ಕೊಂಬೆರೆಂಬೆಗಳಲ್ಲಿ ಹೊಸ ನಂಬಿಕೆಗಳ, ಹೊಸ ಭರವಸೆಗಳ ಚಿಗುರನ್ನು ಚಿಮ್ಮಿಸಿ, ನಿಸರ್ಗವನ್ನು ಪುನರ್‌ನವೀಕರಿಸುವ ಸೃಜನಾತ್ಮಕ ಶಕ್ತಿಯಾದ ವಸಂತದ ಹಾಗೆ ಬರುತ್ತಾರಂತೆ ಸಂತರು. ಹೀಗೆ ಮುಟ್ಟಿ

ದೆಡೆಗಳಲ್ಲೆಲ್ಲ ಹೊಸ ಚಿಗುರನ್ನು ಚಿಮ್ಮಿಸುತ್ತ ಸಂಚಾರ ಮಾಡುವ ಈ ಸಂತರಿಂದ ಲೋಕದ ಹಿತ ಸಾಧಿತ ವಾಗುತ್ತದೆ.


ಸ್ವಾಮಿ ವಿವೇಕಾನಂದರು ಬರುವ ಹೊತ್ತಿಗೆ ಈ ದೇಶದ ಬದುಕು ತನ್ನೆಲ್ಲ ಹಳೆಯ ನೆನಪುಗಳನ್ನು ಕಳಚಿಕೊಂಡು, ನಿರಾಸೆಯ ಮಬ್ಬಿನಲ್ಲಿ ಹೊಸ ಹುಟ್ಟಿನ ಅನಿಶ್ಚಯತೆಗಳಲ್ಲಿ ಸ್ಥಗಿತಗೊಂಡಿತ್ತು.

**ಮನಸ್ಸಿನಲ್ಲಿ ಅರಿವು ಮೂಡುವುದು ಮತ್ತು ಚಾರಿತ್ರ್ಯ ಸುಧಾರಣೆ–ಇದೊಂದೇ ನಿಜವಾದ ಕ್ರಾಂತಿ. ತತ್ತ್ವಜ್ಞಾನಿಗಳು ಮತ್ತು ಸಂತರು – ಇವರೇ ನಿಜವಾದ ಕ್ರಾಂತಿಕಾರರು.**

*ವಿಲ್ ಡ್ಯುರಾಂಟ್*

ಅಲ್ಲಾಡಿಸಿದ್ದು ಈ ಸಮ್ಮೇಳನ; ತಮ್ಮ ತಮ್ಮ ಮತಧರ್ಮಗಳೇ ಮನುಷ್ಯನ ಉದ್ಧಾರಕ್ಕಿರುವ ಏಕೈಕಮಾರ್ಗಗಳೆಂಬ ಕೂಪಮಂಡೂಕ ಪ್ರವೃತ್ತಿಗಳನ್ನು ಧ್ವಂಸ ಮಾಡಿದ್ದು ಈ ಸಮ್ಮೇಳನ; ಹಿಂದೂಧರ್ಮದ ತಿರುಳಾದ ಸರ್ವ ಧರ್ಮ ಸಹಿಷ್ಣುತೆಯನ್ನೂ, ಮತಗಳೆಲ್ಲವೂ ಕೇವಲ ಪಥಗಳು ಎಂಬ ಮಹಾ ತತ್ತ್ವವನ್ನೂ ಮೊಟ್ಟಮೊದಲ ಬಾರಿಗೆ ಘೋಷಿಸಿ, ಭಾರತೀಯ ವೇದಾಂತಕ್ಕೆ ಹಾಗೂ ಅಂದಿನ ಪರಾಕ್ರಾಂತ ಭಾರತಕ್ಕೆ ಅನನ್ಯವಾದ ಗೌರವವನ್ನು ತಂದುಕೊಟ್ಟದ್ದು ಈ ಸಮ್ಮೇಳನ; ಈ ಸಮ್ಮೇಳನದ ಈ ಎಲ್ಲ ಗೆಲುವುಗಳ ಕೇಂದ್ರ ಬಿಂದು ಸ್ವಾಮಿ ವಿವೇಕಾನಂದರು.

ಒಂದೆಡೆ ಪರಕೀಯ ಪ್ರಭುತ್ವದ ಕಾರಣದಿಂದ ತಮ್ಮ ಪೌರುಷವನ್ನೇ ಕಳೆದುಕೊಂಡಿದ್ದ, ತಮ್ಮ ಹಿಂದೆ ಒಂದು ಉಜ್ವಲವಾದ ಆಧ್ಯಾತ್ಮಿಕ ಪರಂಪರೆಯಿದ್ದೂ ಅದರೊಂದಿಗೆ ನಿಜವಾದ ಸಾವಯವ ಸಂಬಂಧವನ್ನು ಸ್ಥಾಪಿಸಿಕೊಳ್ಳಲಾಗದ ಒಂದು ಬಗೆಯ ಜಡ ವಿಸ್ಮೃತಿಗೆ ಒಳಗಾಗಿದ್ದ, ಪರಾನುಕರಣ ಪ್ರವೃತ್ತಿ ಹಾಗೂ ಅವೈಚಾರಿಕತೆಗಳಿಂದ ಕಟ್ಟುಗೊಂಡ, ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದ ಬದುಕಿನ ಸಂದರ್ಭದಲ್ಲಿ, ಹೊಸ ಹುಟ್ಟಿನ ಹರಿಕಾರನಾದ ವಸಂತದಂತೆ ಬಂದರು ಸ್ವಾಮಿ ವಿವೇಕಾನಂದರು. ಆದರೆ 'ವಸಂತದಂತೆ ಬಂದರು' ಎಂಬ ಈ ವರ್ಣನೆಯೂ ಈ ಸಂದರ್ಭದಲ್ಲಿ ಅಸಮರ್ಪಕವೋ ಏನೋ. ಆದಕಾರಣ ಹೀಗೆ ಹೇಳೋಣ: ವಿವೇಕಾನಂದರು ಕೇವಲ ವಸಂತದಂತೆ ಬಂದವರಲ್ಲ; ವಸಂತದ ಜತೆಗೆ ಬರುವ ಗುಡುಗು–ಸಿಡಿಲು–ಮಿಂಚು–ಬಿರುಗಾಳಿಗಳ ಸಹಿತ ಮುಂಗಾರಿನ ಹಾಗೆ ಬಂದರು. ಮುಂಗಾರಿನ ಈ ಬಿರುಗಾಳಿಗೆ ಹಳೆಯ ನಂಬಿಕೆಗಳ ತರಗೆಲ್ಲಾ ಚೆಲ್ಲಾಪಿಲ್ಲಿಯಾದವು; ಜಡಿಮಳೆಯ ಬಡಿತಕ್ಕೆ ಪಾಚಿಗಟ್ಟಿ ನಾರುತ್ತಿದ್ದ ಆಲೋಚನೆಗಳು, ಚಿಂತನೆಗಳು ಕೊಚ್ಚಿಹೋಗಿ, ಹೊಸನೀರು ನುಗ್ಗಿ, ಶುಷ್ಕವಾದ ನೆಲವೆಲ್ಲ ನೀರುಂಡು ಹೊಸ ತೊಂದು ಹುಟ್ಟಿಗೆ ಹದವಾಯಿತು. ಇಡೀ ಒಂದು ಕಾಲಮಾನವೇ ಬದಲಾಯಿತು. ಇಂಥ ಒಂದು ಪರಿವರ್ತನೆಯನ್ನು ತಂದವರು ಸ್ವಾಮಿ ವಿವೇಕಾನಂದರು.



## ವಿವೇಕಾನಂದರನ್ನು ಕುರಿತು

ಈ ಸಮ್ಮೇಳನದ ವೇದಿಕೆಯ ಮೇಲೆ ಇತರ ಧರ್ಮಗಳ ಪ್ರತಿನಿಧಿಗಳ ಪಂಕ್ತಿಯಲ್ಲಿ ಕುಳಿತ ಸ್ವಾಮಿ ವಿವೇಕಾನಂದರನ್ನು ಅದೇ ಸಭೆಯಲ್ಲಿ ಉಪಸ್ಥಿತರಾಗಿದ್ದ ಶ್ರೀಮತಿ ಆನಿಬೆಸೆಂಟ್ ವರ್ಣಿಸಿರುವುದು ಹೀಗೆ:

'ಗೈರಿಕವಸನ ಭೂಷಿತರಾದ ಸ್ವಾಮಿ ವಿವೇಕಾನಂದರು ಅತ್ಯಾಕರ್ಷಕ ವ್ಯಕ್ತಿಯಾಗಿದ್ದರು. ಚಿಕಾಗೊ ನಗರದ ಧೂಮಾವೃತ ವಾತಾವರಣದಲ್ಲಿ ಭಾರತದ ಸೂರ್ಯನು ಬೆಳಗುವಂತೆ ಅವರು ಕಂಗೊಳಿಸುತ್ತಿದ್ದರು. ಸಿಂಹದಂತೆ ಉನ್ನತ ಶಿರ, ತೀಕ್ಷ್ಣವಾದ ಕಣ್ಣುಗಳು, ಚಂಚಲ ತುಟಿ, ಚುರುಕು ನಡೆ– ಇದು ವಿಶ್ವಧರ್ಮ ಸಮ್ಮೇಳನದಲ್ಲಿ ಮೊಟ್ಟಮೊದಲಿಗೆ ಸ್ವಾಮಿ ವಿವೇಕಾನಂದರು ನನಗೆ ಕಾಣಿಸಿಕೊಂಡ ಬಗೆ. ಸಂನ್ಯಾಸಿ ಎಂದು ಅವರನ್ನು ಕರೆಯುತ್ತಿದ್ದರು, ಆದರೆ ಅವರು ಬರಿಯ ಸಂನ್ಯಾಸಿಯಲ್ಲ. ಅವರು ನನಗೆ ಕಂಡದ್ದು ಯೋಧ ಸಂನ್ಯಾಸಿಯಂತೆ. ಏಕೆಂದರೆ ಅವರು ತಮ್ಮ ರಾಷ್ಟ್ರದ ವಿಷಯದ ಅಭಿಮಾನದಿಂದ ತುಂಬಿತುಳುಕುತ್ತಿದ್ದರು.'

ಚಿಕಾಗೋದ ಪತ್ರಿಕೆಗಳು ಅವರನ್ನು ಬಿರುಗಾಳಿಯ ಸಂನ್ಯಾಸಿ ಎಂದು ವರ್ಣಿಸಿದವು.

## ಚಿಕಾಗೋ ಸರ್ವಧರ್ಮ ಸಮ್ಮೇಳನದ ಮಹತ್ವ

ಚಿಕಾಗೋದ ಸರ್ವಧರ್ಮ ಸಮ್ಮೇಳನ ಸ್ವಾಮೀಜಿಯವರ ಬದುಕಿನ ಒಂದು ಮಹತ್ವದ ಘಟ್ಟ ಎನ್ನಬಹುದು. ಅದು ಸ್ವಾಮಿ ವಿವೇಕಾನಂದರನ್ನು ಲೋಕವಿಖ್ಯಾತರನ್ನಾಗಿ ಮಾಡಿದ ಸಂದರ್ಭ ಎಂಬುದಷ್ಟೆ ಅದರ ಮಹತ್ವಕ್ಕೆ ಕಾರಣವಲ್ಲ. ನೂರಾರು ವರ್ಷಗಳಿಂದ ಜಗತ್ತಿನ ಅಲಕ್ಷ್ಯಕ್ಕೆ ತುತ್ತಾಗಿದ್ದ ಭಾರತದ ಕಡೆಗೆ ಜಗತ್ತಿನ ಗಮನ ಸೆಳೆಯುವಂತೆ ಮಾಡಿದುದು ಈ ಸಮ್ಮೇಳನ. ಕ್ರೈಸ್ತ ಧರ್ಮವೊಂದೇ ಶ್ರೇಷ್ಠ ಎಂಬ ಹುಸಿ ನಂಬಿಕೆಯ ಬೇರುಗಳನ್ನು

ಸ್ವಾಮಿ ವಿವೇಕಾನಂದರ ಜೀವನಚರಿತ್ರೆಯನ್ನು ಬರೆದ ರೊಮೇನ್ ರೋಲಾ ಎಂಬ ಸುಪ್ರಸಿದ್ಧ ಲೇಖಕ 'ಸ್ವಾಮಿ ವಿವೇಕಾನಂದರು ಚೈತನ್ಯದ ಪ್ರತಿರೂಪವೇ ಸರಿ, ಅವರು ಭಾರತದ ಯೋಧ ಪ್ರವಾದಿ' ಎಂದು ಬರೆಯುತ್ತಾರೆ.

ಶ್ರೀ ಅರವಿಂದರು 'ಮನುಷ್ಯರ ನಡುವೆ ಈತನೊಬ್ಬ ಪುರುಷ ಸಿಂಹ' ಎಂದು ಪ್ರಶಂಸಿಸಿದರೆ, ನೇತಾಜಿ ಸುಭಾಷ್‌ಚಂದ್ರ ಬೋಸರು 'ಸ್ವಾಮಿ ವಿವೇಕಾನಂದರು ಒಬ್ಬ ಹುಟ್ಟು ಹೋರಾಟಗಾರರು' ಎಂದು

ಗುರುತಿಸುತ್ತಾರೆ. ಈ ಎಲ್ಲ ಅನ್ನಿಸಿಕೆಗಳೂ ನಮ್ಮ ಮುಂದೆ ಕೇವಲ ಒಬ್ಬ ಸಂತನ ಅಥವಾ ಸಂನ್ಯಾಸಿಯ ಚಿತ್ರವನ್ನು ಕೊಡುವುದಿಲ್ಲ. ಒಬ್ಬ ಅದ್ಭುತವಾದ ಹಾಗೂ ಧೀರನಾದ ಯೋಧನ, ಹೋರಾಟಗಾರನ ಚಿತ್ರವನ್ನು ಕಟ್ಟಿಕೊಡುತ್ತವೆ. ಹಾಗೂ ವಿವೇಕಾನಂದರು ಒಬ್ಬ ಕ್ರಾಂತಿಕಾರೀ ಸಂತರಾಗಿದ್ದಾರೆ ಎಂಬುದನ್ನು ಸಮರ್ಥಿಸುತ್ತವೆ.

**ನ್ಯೂಯಾರ್ಕ್ ಹೆರಾಲ್ಡ್**
**ವಿವೇಕಾನಂದರ ಬಗ್ಗೆ ಹೀಗೆ ಹೇಳುತ್ತದೆ:**

ಸರ್ವಧರ್ಮಸಮ್ಮೇಳನದಲ್ಲಿ ವಿವೇಕಾನಂದರೇ ಶ್ರೇಷ್ಠತಮ ವ್ಯಕ್ತಿ. ಅವರ ಭಾಷಣವನ್ನು ಕೇಳಿದ ಮೇಲೆ ಇಂತಹ ಸುಸಂಸ್ಕೃತ ದೇಶಕ್ಕೆ ನಾವು ಧರ್ಮ ಪ್ರಚಾರಕರನ್ನು ಕಳಿಸುವುದು ಶುದ್ಧ ಮೂರ್ಖತನವೆಂದೇ ಭಾವಿಸುತ್ತೇವೆ.

**ವಿವೇಕಾನಂದರಲ್ಲಿದ್ದ ಕ್ರಾಂತಿಕಾರಿಯ ಲಕ್ಷಣಗಳು**

ಒಬ್ಬನು ತನ್ನ ಪರಿಸರದಲ್ಲಿ ಒಂದು ಕ್ರಾಂತಿಯನ್ನು ಅಥವಾ ಆಮೂಲಾಗ್ರವಾದ ಬದಲಾವಣೆಯನ್ನು ತರಬೇಕಾದರೆ ಮೊದಲು ಅವನಿಗೆ ತನ್ನ ವರ್ತಮಾನದ ನಂಬಿಕೆಗಳನ್ನು ಚಿಂತನೆಗಳನ್ನು ಹಾಗೂ ಜೀವನಕ್ರಮವನ್ನು ನಿಯಂತ್ರಿಸುವ ಗತಕಾಲದ ಅಥವಾ ಪರಂಪರೆಯ ಪ್ರಜ್ಞೆ ಬೇಕು. ಸಮಕಾಲೀನ ವಾಸ್ತವಗಳ ಗಾಢವಾದ ಅನುಭವಗಳ ಮೂಲಕ ಹುಟ್ಟಿ ಕೊಳ್ಳುವ, ಶ್ರೀ ಸಾಮಾನ್ಯರ ಪರವಾದ ತುಡಿತಗಳಿರಬೇಕು. ಅದಮ್ಯವಾದ ಜೀವನ ಪ್ರೀತಿ ಇರಬೇಕು. ಅಪ್ರತಿಮವಾದ ಧೈರ್ಯ ಇರಬೇಕು. ಭವಿಷ್ಯದ ಬಗ್ಗೆ ಖಚಿತವಾದ ಕಲ್ಪನೆಗಳಿರಬೇಕು. ಎಲ್ಲಕ್ಕಿಂತ ಮಿಗಿಲಾಗಿ ವೈಚಾರಿಕ ಮನೋಧರ್ಮವಿರಬೇಕು. ಸ್ವಾಮಿ ವಿವೇಕಾನಂದರು ಈ ಎಲ್ಲವನ್ನೂ ಉಳ್ಳವರಾಗಿದ್ದರು. ಅಂದರೆ ಭೂತ ವರ್ತಮಾನ ಹಾಗೂ ಭವಿಷ್ಯತ್ ಕಾಲವನ್ನು ಏಕಕಾಲಕ್ಕೆ ಗ್ರಹಿಸಬಲ್ಲವರಾಗಿದ್ದರು.

ಸ್ವಾಮೀಜಿ ಭಾರತದ ಪ್ರಾಚೀನ ಪರಂಪರೆಯನ್ನು ಚೆನ್ನಾಗಿ ಬಲ್ಲವರಾಗಿದ್ದರು. ಒಂದೆಡೆ ತಮ್ಮ ನಿರಂತರವಾದ ಹಾಗೂ ಆಳವಾದ ಅಧ್ಯಯನದ ಮೂಲಕ, ಭಾರತದ ಇತಿಹಾಸ, ಪುರಾಣ, ಶಾಸ್ತ್ರ, ವೇದೋಪನಿಷತ್ತುಗಳು ಇತ್ಯಾದಿಗಳನ್ನು ರಕ್ತಗತಮಾಡಿಕೊಂಡಿದ್ದರು. ಹಾಗೆಯೇ ಆಧುನಿಕ ಶಿಕ್ಷಣದ ಮೂಲಕ ಪಾಶ್ಚಾತ್ಯ ತತ್ತ್ವಜ್ಞಾನ, ವಿಜ್ಞಾನ ಹಾಗೂ ಸಾಮಾಜಿಕ ಚಿಂತನೆಗಳನ್ನು ಅರಗಿಸಿಕೊಂಡವರಾಗಿದ್ದರು. ಎಲ್ಲಕ್ಕಿಂತ ಮಿಗಿಲಾಗಿ ಆರು ವರ್ಷಗಳ ಕಾಲ ಶ್ರೀರಾಮಕೃಷ್ಣರ ಸಾಕ್ಷಾತ್ ಶಿಷ್ಯರಾಗಿ, ಜಗತ್ತಿನ ಎಲ್ಲ ಧರ್ಮಗಳನ್ನೂ ಸಾಕ್ಷಾತ್ಕರಿಸಿಕೊಂಡ ಶ್ರೀರಾಮಕೃಷ್ಣ ಪರಮಹಂಸರ ಆಧ್ಯಾತ್ಮಿಕ ಸಂಪತ್ತಿನ ಅಧಿಕಾರಿಯೂ ಆಗಿದ್ದರು. ಹೀಗಾಗಿ ಸ್ವಾಮಿ ವಿವೇಕಾನಂದರು ತಾವು ಎಂತಹ ಉಜ್ವಲವಾದ ಪರಂಪರೆಗೆ ಹಕ್ಕುದಾರರಾಗಿದ್ದೇವೆ ಎಂಬುದನ್ನು ಬಲ್ಲವರಾಗಿದ್ದರು. ಈ ಪರಂಪರೆಗೆ ಸ್ವಾಮೀಜಿ ತೋರಿದ ಪ್ರತಿಕ್ರಿಯೆಗಳೇನು, ಅದನ್ನು ಅವರು ತಮ್ಮ ವರ್ತಮಾನದ ಅಗತ್ಯಗಳಿಗೆ ತಕ್ಕಂತೆ ಹೇಗೆ ವ್ಯಾಖ್ಯಾನಿಸಿದರು ಎನ್ನುವುದು ಬಹುಮುಖ್ಯವಾದ ಸಂಗತಿಯಾಗಿದೆ.

ಹೀಗೆ ಸ್ವಾಮಿ ವಿವೇಕಾನಂದರು ಶ್ರೇಷ್ಠ ಸಂತರಾಗಿದ್ದು ಮಾತ್ರವಲ್ಲದೆ, ಕ್ರಾಂತದರ್ಶಿಯೂ ಅಪಾರ ಸಾಮಾಜಿಕ ಕಳಕಳಿಯುಳ್ಳವರೂ ಆಗಿದ್ದು, ತಮ್ಮ ಚಿಂತನೆ ಮತ್ತು ಸಾಧನೆಗಳ ಮೂಲಕ ಮಹಾಕ್ರಾಂತಿಕಾರಿಯಾಗಿಯೂ ಅವರು ನಮಗೆ ಕಾಣಿಸಿಕೊಳ್ಳುತ್ತಾರೆ.

# ದೈವೀ ಸಂವೇದನೆ

ಡಾರ್ಜಿಲಿಂಗಿನಲ್ಲಿ ಒಂದು ದಿನ ಸ್ವಾಮಿ ವಿವೇಕಾನಂದರು ಬೆಳಗ್ಗೆ ತಿಂಡಿಯ ನಂತರ ಕೆಲವರೊಡನೆ ಗಾಳಿಸೇವನೆಗೆ ಹೊರಟಿದ್ದರು. ಇದ್ದಕ್ಕಿದ್ದಂತೆಯೇ ಒಬ್ಬಾಕೆ ಭಾಟಿಯಾ ಮಹಿಳೆ ಅವರ ಮನಸ್ಸಿಗೆ ಗೋಚರಿಸಿದಳು—ಆಕೆ ಹೊರಲಾಗದ ಹೊರೆಯನ್ನು ಹೊತ್ತುಕೊಂಡು ಹೋಗುತ್ತ ಜಾರಿ ಬಿದ್ದುದನ್ನು ಕಂಡರು. ಅವರೊಡನಿದ್ದವರಾರಿಗೂ ಇದು ಗೋಚರಿಸಲಿಲ್ಲ. ಅವರೆಲ್ಲ ಯುವಕರು, ಅನುಭವಸ್ಥರಲ್ಲ, ಮತ್ತು ಸ್ವಾಮೀಜಿಯವರ ದಿವ್ಯಸಂವೇದನೆ ಅವರಿಗೆ ಅರ್ಥವಾಗಲಿಲ್ಲ. ಸ್ವಾಮೀಜಿ ಯಾವುದೊ ಬಹುದೂರದ ವಸ್ತುವಿನಲ್ಲಿ ತಮ್ಮ ದೃಷ್ಟಿಯನ್ನು ಸ್ಥಿರಗೊಳಿಸಿದ್ದರು. ಮುಂದಡಿ ಇಡಲಾಗಲಿಲ್ಲ. ಅವರ ಮುಖ ಕಳೆಗುಂದಿತು. ತೀವ್ರ ವೇದನೆಯಿಂದ ಕೂಗಿದರು, 'ಹಾ! ಇಲ್ಲಿ ತುಂಬ ನೋವಾಗುತ್ತಿದೆ, ನಾನು ನಡೆಯಲಾರೆ' ಎಂದು. 'ಸ್ವಾಮೀಜಿ, ಎಲ್ಲಿ ನೋವಾಗುತ್ತಿದೆ?' ಎಂದು ಯಾರೋ ಕೇಳಿದರು. ಅವರು ತಮ್ಮ ಪಾರ್ಶ್ವವನ್ನು ತೋರಿಸಿ, 'ಇಲ್ಲಿ, ಆ ಹೆಂಗಸು ಬಿದ್ದದ್ದನ್ನು ನೀನು ನೋಡಲಿಲ್ಲವೆ?'ಎಂದರು. ಯಾರಿಗೂ ಏನೂ ಅರ್ಥವಾಗಲಿಲ್ಲ. ಅವರಿಗೆ ಹೇಗೆ ಅಲ್ಲಿ ನೋವಾಯಿತೆಂದು ಎಲ್ಲರೂ ಆಶ್ಚರ್ಯಪಟ್ಟರು. ಆದರೆ ಯಾರಿಗೂ ಕೇಳುವ ಧೈರ್ಯವಿರಲಿಲ್ಲ. ಆದರೆ ಮುಂದೆ ಈ ಘಟನೆಯ ವೈಶಿಷ್ಟ್ಯ ಅವರಿಗೆ ತಿಳಿಯಿತು. ಮನುಷ್ಯ- ಮನುಷ್ಯನ ನಡುವೆ ಸಹಾನುಭೂತಿಯ ಒಂದು ಸಂಬಂಧವಿದೆ. ಸ್ವಾಮೀಜಿಯವರಂತಹ ದೈವೀಪುರುಷರು ದೂರದಿಂದಲೂ ಇತರರ ವೇದನೆಗಳನ್ನು ಅರಿಯಬಲ್ಲರು. ಅವರ ವೇದನೆಯ ಸಂವೇದನೆ ಇವರಿಗೂ ಆಗಬಲ್ಲದು.